ವರ್ತಿಸುತ್ತಿದ್ದಾರೆ? ಏನಿದು ಇವರಿಗೆ ಜವಾಬ್ದಾರಿಯೇ ಇಲ್ಲ ನೋಡಿ ನಿಮ್ಮ ಸದಸ್ಯರು ಇಷ್ಟೊಂದು ಬೇಜವಾಬ್ದಾರಿ ರೀತಿಯಲ್ಲಿ ಈ ರೀತಿ ಪ್ರತಿಯೊಂದಕ್ಕೂ ನಿಂತುಕೊಂಡರೆ ಇದನ್ನು ನಾನು ಸಹಿಸುವುದಕ್ಕೆ ಸಾಧ್ಯವಿಲ್ಲ ನೋಡಿ ಯಾವ ರೀತಿ ವರ್ತಿಸುತ್ತಿದ್ದಾರೆ ಅವರಿಗೆ ಏನಾಗಿದೆ ಅಂದರೆ ನಾವು ಏನು ಬೇಕಾದರೂ ಮಾಡಬಹುದು,..... ಈಗ ಮಾನ್ಯ ರಾಜಾಜೀಯವರು ಏನು ಹೇಳಿದರು ಅಂದರೆ, Liberty is not Licence" ಆದರೆ ಈ ಸದಸ್ಯರು ಲೈಸೆನ್ಸ್ ತೆಗೆದುಕೊಂಡಿದ್ದಾರೆ ಒಳಗೆ ಬಂದಿರುವುದೇ ಇವರಿಗೆ ಒಂದು ಲೈಸೆನ್ಸ್ ಪ್ರತಿಯೊಬ್ಬರೂ ನಿಮ್ಮ ನಿಮ್ಮ ಜವಾಬ್ದಾರಿಗಳನ್ನು ಅರ್ಥ ಮಾಡಿಕೊಳ್ಳಬೇಕು ಏನಿದು?

ಶ್ರೀ ಸಿದ್ಧರಾಮಯ್ಯ ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೇ ಹೇಳಿದ್ದೇನೆ

ಅಧ್ಯಕ್ಷರು ಈ ಕಡೆ ಸದಸ್ಯರು ಅಷ್ಟೇ, ಆ ಕಡೆಯ ಸದಸ್ಯರು ಅಷ್ಟೇ ಯಾರಿಗೂ ಜವಾಬ್ದಾರಿ ಇಲ್ಲ

ಗೊಂದಲ

ಶ್ರೀ ಬಿ ಎಸ್ ಯಡಿಯೂರಪ್ಪ ಮಾನ್ಯ ಅಧ್ಯಕ್ಷರೇ, ನಮ್ಮ ಕಡೆ ಸದಸ್ಯರು ನೋಡಿ ಎಷ್ಟು ಗಂಭೀರವಾಗಿ ವರ್ತಿಸುತ್ತಿದ್ದಾರೆ ತಾವು ಆ ಕಡೆಯ ಸದಸ್ಯರಿಗೆ ಹೇಳಬೇಕು

ಗೊಂದಲ

ಅಧ್ಯಕ್ಷರು ಹೊಸ ಸದಸ್ಯರುಗಳು ಇದ್ದಾರಲ್ಲಾ ಅವರುಗಳಿಗೆ ಅನೇಕ ವಿಷಯಗಳ ಬಗ್ಗೆ ಚರ್ಚೆ ಮಾಡಬೇಕು ಎನ್ನುವ ಆಸೆ ನಾಳೆ ಸದನ ಕೊನೆಯಾಗುತ್ತದೆ ಇದು ನನಗೆ ಅರ್ಥವಾಗುತ್ತದೆ ನಾನು ಬಹಳ ಜನರಿಗೆ ಅವಕಾಶ ಕೊಡುತ್ತಿದ್ದೇನೆ ಈಗಾಗಲೇ ಒಂದೂಮುಕ್ಕಾಲು ಗಂಟೆ ಆಯಿತು ಈಗ ಇಷ್ಟೊಂದು ಗಲಾಟೆಯಾಯಿತು ಇಷ್ಟರಲ್ಲಿ ನಾಲ್ಕು ಜನ ಸದಸ್ಯರು ಸರ್ಕಾರದ ಗಮನ ಸೆಳೆಯಬಹುದಾಗಿತ್ತು ಅವರವರ ವಿಷಯ ಎತ್ತಬಹುದಾಗಿತ್ತು ಈ ರೀತಿ ಗಲಾಟೆ ಮಾಡಿದರೆ ಹೇಗೆ? ನೀವು ಶಾಸಕರು, ಶಾಸನ ಮಾಡತಕ್ಕಂಥವರು ಜವಾಬ್ದಾರಿವುಳ್ಳವರು ಈ ಐದೂವರೆ ಕೋಟಿ ಜನರ ರಕ್ಷಣೆ ಮಾಡುವುದಕ್ಕೆ ಜನ ಪ್ರತಿನಿಧಿಗಳಾಗಿ ಬಂದಿರುವವರು ನೀವೇ ಈ ರೀತಿ ವರ್ತನೆ ಮಾಡಿದರೆ ಜನ ಹೇಗೆ ವರ್ತನೆ ಮಾಡಬಹುದು? ನಿಮ್ಮ ಅಧಿಕಾರಿಗಳು ಹೇಗೆ ವರ್ತನೆ ಮಾಡಬಹುದು, ಇನ್ನೊಬ್ಬರು ಹೇಗೆ ವರ್ತನೆ ಮಾಡಬಹುದು? No, No, ಈಗ ನಾನು ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರನ್ನು ಕರೆದಿದ್ದೇನೆ. ದಯಮಾಡಿ ತಾವೆಲ್ಲರೂ ಕುಳಿತುಕೊಳ್ಳಬೇಕು ವಾಟಾಳ್ ನಾಗರಾಜ್‌ರವರೇ, ತಾವು ದಯಮಾಡಿ ಮಾತನಾಡಿ

6 ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು (ಮುಂದು)

9 ರಾಜ್ಯ ಸರ್ಕಾರ ಆಯವ್ಯಯವನ್ನು ಮಂಡಿಸಿದ ಮೇಲೆ ಆರ್ಥಿಕ ನೀತಿಯಿಂದ ಪರಭಾಷಾ ಚಿತ್ರಗಳಿಗೆ ಅಪಾರವಾದ ಬೆಂಬಲವನ್ನು ನೀಡಿದಂತಾಗಿರುವ ಬಗ್ಗೆ

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದಲ್ಲಿ ಸರ್ಕಾರ ಆಯವ್ಯಯವನ್ನು ಮಂಡಿಸಿದ ಮೇಲೆ ಆರ್ಥಿಕ ನೀತಿಯಿಂದ ಪರಭಾಷಾ

ಚಿತ್ರಗಳಿಗೆ ಅಪಾರವಾದ ಬೆಂಬಲವನ್ನು ನಾವೇ ಕೊಟ್ಟಂತೆ ಆಗಿದೆ ಬಹುಶಃ ಪರಭಾಷಾ ಚಿತ್ರಗಳು ಅವರ ರಾಜ್ಯದಲ್ಲಿ ತಯಾರಾದ ತಕ್ಷಣ ಅಲ್ಲಿ ಬಿಡುಗಡೆಯಾದ ದಿವಸವೇ ಇಲ್ಲೂ ಬಿಡುಗಡೆ ಮಾಡುತ್ತಾರೆ ಒಂದೊಂದು ಪರಭಾಷಾ ಚಿತ್ರಗಳಿಗೆ ಕರ್ನಾಟಕ ರಾಜ್ಯದಲ್ಲಿ ಕನ್ನಡ ಚಿತ್ರಗಳಿಗಿಂತ ಹೆಚ್ಚಾಗಿ ಮೂರು ಕೋಟಿ ರೂಪಾಯಿ ಒಂದೊಂದು ಚಿತ್ರ ತನ್ನ ಗಳಿಕೆಯನ್ನು ಮಾಡತಕ್ಕಂಥಾದ್ದು ಇದೆ. ನನಗನಿಸುತ್ತದೆ, ಬೇರೆ ರಾಜ್ಯಗಳಲ್ಲಿ ಕನ್ನಡ ಚಿತ್ರಗಳ ಪ್ರದರ್ಶನ ಇಲ್ಲ ತಮಿಳುನಾಡು ಇರಬಹುದು, ಆಂಧ್ರ ಪ್ರದೇಶ ಇರಬಹುದು, ಕೇರಳ ಇರಬಹುದು, ಇಂಡಿಯಾ ದೇಶದಲ್ಲಿ ಯಾವ ಮೂಲೆಯಲ್ಲೂ ಕನ್ನಡ ಚಿತ್ರಗಳ ಪ್ರದರ್ಶನ ಇಲ್ಲ ಆದರೆ ಕರ್ನಾಟಕ ರಾಜ್ಯದಲ್ಲಿ ಮಾತ್ರ ಎಲ್ಲಾ ಭಾಷೆಯ ಚಿತ್ರಗಳು ಇಲ್ಲಿ ಹಣ ಸಂಪಾದನೆ ಮಾಡುತ್ತವೆ ಆದರೆ ಕನ್ನಡ ಚಿತ್ರಗಳು ಅವಸಾನದ ಅಂಚಿಗೆ ಬಂದಿದೆ ಒಂದು ಕಾಲದಲ್ಲಿ ಕರ್ನಾಟಕದಲ್ಲಿ ಕನ್ನಡ ಚಿತ್ರಗಳ ಬೆಳವಣಿಗೆಗಾಗಿ ಅನೇಕ ಯೋಜನೆಗಳು ತಯಾರಾಗಿ ಸಹಾಯಧನ ಕೊಡತಕ್ಕಂಥಾದ್ದು ಆರಂಭವಾದುದು ಸುಮಾರು 1972ನೇ ಇಸವಿಯಲ್ಲಿ ಆಗಿನಿಂದ ಸಹಾಯಧನ ಕೊಡುತ್ತಿದ್ದೇವೆ, ತಮಿಳುನಾಡಿನಲ್ಲಿರತಕ್ಕಂಥ ಚಿತ್ರಗಳೆಲ್ಲಾ ಕರ್ನಾಟಕ ರಾಜ್ಯಕ್ಕೆ ಬರಬೇಕು, ನಿಮಗೆ ಎಲ್ಲಾ ರೀತಿಯ ಬೆಂಬಲ ಕೊಡುತ್ತೇವೆ ಸ್ಟುಡಿಯೋ ಅನುಕೂಲ ಕೊಡುತ್ತೇವೆ ಪ್ರತಿಯೊಂದನ್ನು ಮಾಡುತ್ತೇವೆಂದು ಹೇಳಿ ನಾವು ಅವರನ್ನೆಲ್ಲಾ ಕರೆದುಕೊಂಡು ಬಂದಿದ್ದು ಆಯಿ ೆ ಆದರೆ ಇವತ್ತು ಬೆಂಗಳೂರು ಸೇರಿದಂತೆ ಕರ್ನಾಟಕದ ಎಲ್ಲಾ ಕಡೆ ಮೊದಲನೇ ಸ್ಥಾನ ಪಡೆದಿರತಕ್ಕಂಥಾವು ಪರಭಾಷಾ ಚಿತ್ರಗಳು, 3–4ನೇ ಸ್ಥಾನದಲ್ಲಿವೆ ಇವತ್ತು ಸರ್ಕಾರದ ಧೋರಣೆ ಬದಲಾವಣೆಯಾಗಬೇಕು ಪರಭಾಷಾ ಚಿತ್ರಗಳನ್ನು ಇಲ್ಲಾ ನೇರವಾಗಿ ನಾವು ಕರ್ನಾಟಕ ರಾಜ್ಯದಲ್ಲಿ ಬಹಿಷ್ಕಾರ ಮಾಡುತ್ತೇವೆ ಪರಭಾಷಾ ಚಿತ್ರಗಳು ಬೇಡ ಎಂದು ಹೇಳಬೇಕು ಇಲ್ಲಾ ಪರಭಾಷಾ ಚಿತ್ರಗಳು ಅಲ್ಲಿ ಆರಂಭವಾಗಿ ಹೊಸ ಚಿತ್ರಗಳ ಪ್ರದರ್ಶನಕ್ಕೆ 4 ವಾರಗಳು ಅದ ನಂತರ ಇಲ್ಲಿಗೆ ಬರಬೇಕೇ ಹೊರತು ಹೊಸ ಪರಭಾಷಾ ಚಿತ್ರಗಳು ಇಲ್ಲಿಗೆ ಬರಬಾರದು 9ನೇ ತಾರೀಖು ಕರ್ನಾಟಕ ರಾಜ್ಯಾದ್ಯಂತ ಕನ್ನಡ ಚಿತ್ರೋದ್ಯಮ ಬಂದ್ ಆಗತಕ್ಕಂಥ ವ್ಯವಸ್ಥೆ ಇದೆ ನಾನು ಮಾನ್ಯ ಉಪ ಮುಖ್ಯಮಂತ್ರಿಗಳಿಗೆ ಹೇಳುತ್ತಿದ್ದೇನೆ ಬಂದ್ ಆಗುವಂತಹ ವ್ಯವಸ್ಥೆ ಇರತಕ್ಕದ್ದು 9ನೇ ತಾರೀಖು ಆದರೆ ತಮಗೆ ನಾನು ಹೇಳುತ್ತಿದ್ದೇನೆ ಮಾನ್ಯ ಅಧ್ಯಕ್ಷರೇ ಕನ್ನಡ ಚಿತ್ರಗಳ ಬೆಳವಣಿಗೆ ಹಿತದೃಷ್ಟಿಯಿಂದ ಕನ್ನಡ ಚಿತ್ರಗಳು ಅದ್ದೂರಿಯ ಒಂದು ಉನ್ನತ ಶಿಖರಕ್ಕೆ ಏರಬೇಕೆನ್ನುವ ಉದ್ದೇಶದಿಂದ ನಾವು ಪರಭಾಷಾ ಚಿತ್ರಗಳನ್ನು ಮೊದಲನೆಯದಾಗಿ ಕರ್ನಾಟಕ ರಾಜ್ಯದಲ್ಲಿ ಬಹಿಷ್ಕರಿಸಬೇಕು ಮತ್ತು ಅವರಿಗೆ ತೆರಿಗೆಯನ್ನು ಏನು ಕಡಿಮೆ ಮಾಡಿದ್ದೀರಿ ಆ ತೆರಿಗೆಯನ್ನು ಜಾಸ್ತಿ ಮಾಡಲೇಬೇಕು ಇದು ನನ್ನ ಅತ್ಯಂತ ಕಳಕಳಿಯ ಮನವಿ

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು) ಮಾನ್ಯ ಅಧ್ಯಕ್ಷರೇ ಕನ್ನಡೇತರ ಚಿತ್ರಗಳು ಮತ್ತು ಕನ್ನಡ ಚಲನಚಿತ್ರಗಳು, ಕನ್ನಡ ಚಲನಚಿತ್ರಗಳಿಗೆ ಸಂಪೂರ್ಣವಾಗಿ ನೂರಕ್ಕೆ ನೂರರಷ್ಟು ತೆರಿಗೆಯನ್ನು ವಿನಾಯಿತಿ ಮಾಡಿದ್ದೇವೆ ಒಂದು ಪೈಸೆ ತೆರಿಗೆ ಇಲ್ಲ. ಈ ಕನ್ನಡ ಚಿತ್ರೋದ್ಯಮದಲ್ಲಿ ಇಡೀ ಫಿಲಂ ಇಂಡಸ್ಟ್ರಿಯಲ್ಲಿ ಪ್ರೊಡ್ಯೂಸರ್ಸ್‌ದ್ದು ಒಂದು ಅಸೋಸಿಯೇಷನ್ ಇದೆ ಡೈರೆಕ್ಟರ್ಸ್ ಅಸೋಸಿಯೇಷನ್ ಇದೆ ಮತ್ತೆ ಎಗ್ಜಿಬ್ಯುಟರ್ಸ್ ಅಸೋಸಿಯೇಷನ್ ಇದೆ ಇನ್ನೂ

4–5 ಈ ತರಹದ ಅಸೋಸಿಯೇಷನ್ಸ್ ಇವೆ ಮತ್ತು ಕಿರುಚಿತ್ರಗಳನ್ನು ಮಾಡುವವರ ಒಂದು ಅಸೋಸಿಯೇಷನ್ ಇದೆ ದೊಡ್ಡ ಚಿತ್ರಗಳನ್ನು ತಯಾರು ಮಾಡುವವರ ಒಂದು ಅಸೋಸಿಯೇಷನ್ ಇದೆ ಈ ರೀತಿ ಎಲ್ಲಾ ಇವೆ, ನಾನು ಆಯವ್ಯಯದಲ್ಲಿ ಈ ನಾನ್ ಕನ್ನಡ ಚಲನಚಿತ್ರಗಳಿಗೆ ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್ 70 ಪರ್ಸೆಂಟ್ ಹಿಂದೆ ಇದ್ದುದನ್ನು 40 ಪರ್ಸೆಂಟಿಗೆ ಇಳಿಸಿದ್ದೇನೆ ಎಗ್ಜಿಬ್ಯುಟರ್ಸ್ ಬಹಳ ದಿನಗಳಿಂದ ನಮಗೆ 70 ಪರ್ಸೆಂಟ್ ಬಹಳ ಜಾಸ್ತಿ ನಮಗೆ ಕಷ್ಟವಾಗುತ್ತದೆ ನಾವು ಕೊಡುವುದಕ್ಕಾಗುವುದಿಲ್ಲ ಎಂದು ಒಂದು ಮನವಿಯನ್ನು ಪದೇ ಪದೇ ಮಾಡುತ್ತಿದ್ದರು ಎರಡನೆಯದು ಕೆಲವು ಕಡೆಗಳಲ್ಲಿ ಚಿತ್ರಮಂದಿರಗಳ ಮುಂದೆ ಕನ್ನಡ ಚಲನಚಿತ್ರಗಳ ಬೋರ್ಡ್ ಹಾಕುವುದು ಮತ್ತು ಅಲ್ಲಿ ಬೇರೆ ಭಾಷೆಯ ಚಲನಚಿತ್ರಗಳನ್ನು ನಡೆಸುವುದು ಹೀಗಾಗಿ ನಮಗೆ ತೆರಿಗೆ ಬರುತ್ತಿರಲಿಲ್ಲ, ಏಕೆಂದರೆ ಕನ್ನಡ ಸಿನಿಮಾಗಳಿಗೆ ಪೂರ್ತಿ ತೆರಿಗೆ ವಿನಾಯಿತಿ ಇದೆ, ಅದಕ್ಕೆ ತೆರಿಗೆ ಒಂದು ಪೈಸೆ ಕೊಡುವಂತಿಲ್ಲ ತಮಿಳು ಚಿತ್ರವಿರಬಹುದು ಮಲೆಯಾಳಂ ಚಿತ್ರವಿರಬಹುದು, ತೆಲುಗು ಚಿತ್ರವಿರಬಹುದು, ಹಿಂದಿ ಚಿತ್ರವಿರಬಹುದು ಮರಾಠಿ ಚಿತ್ರಇರಬಹುದು ತುಳು, ಕೊಡುಗು ಇತ್ಯಾದಿ ಭಾಷೆಗಳ ಚಿತ್ರಗಳಿಗೂ ಕೂಡ, ಕನ್ನಡ ಜೊತೆಗೆ ತೆರಿಗೆ ವಿನಾಯಿತಿ ಇದೆ ಅದಕ್ಕೆ 70 ರಿಂದ 40ಕ್ಕೆ ಇಳಿದಿದೆ ಬೇರೆ ರಾಜ್ಯಗಳಲ್ಲಿ ಆಯಾ ರಾಜ್ಯಗಳ ಭಾಷೆಗಳನ್ನು ಬಿಟ್ಟು ಬೇರೆ ಭಾಷೆಗಳ ಚಿತ್ರಗಳಿಗೆ ಅಲ್ಲಿ 25 ಪರ್ಸೆಂಟ್ ತೆರಿಗೆಗಳಿಗೆ. ತಮಿಳುನಾಡು ಇತ್ಯಾದಿ ಕಡೆಗಳಲ್ಲಿ ಕನ್ನಡ ಚಲನಚಿತ್ರಗಳು ಹೆಚ್ಚು ಪ್ರದರ್ಶನಗಳಾಗುವುದಿಲ್ಲವೆನ್ನುವ ನಿಮ್ಮ ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ, ಅದೇ ರೀತಿ ಆಂಧ್ರದಲ್ಲಿ ಹೆಚ್ಚು ಪ್ರದರ್ಶನವಾಗುವುದಿಲ್ಲ, ಕೇರಳದಲ್ಲಿ ಹೆಚ್ಚು ಪ್ರದರ್ಶನವಾಗುವುದಿಲ್ಲ, ಈ ಬಗ್ಗೆ ಒಂದು ಸಮಿತಿಯನ್ನು ರಚನೆ ಮಾಡುತ್ತೇವೆಂದು ಮೇಲ್ಮನೆಯಲ್ಲಿ ಒಪ್ಪಿಕೊಂಡಿದ್ದೇವೆ, ನನ್ನ ಪರವಾಗಿ ಜಲಸಂಪನ್ಮೂಲ ಸಚಿವರು ಅಲ್ಲಿ ಹೇಳಿಕೆಯನ್ನು ಕೊಟ್ಟಿದ್ದಾರೆ, ನಾನು ಕೂಡ ಅದನ್ನು ಒಪ್ಪಿಕೊಂಡಿದ್ದೇನೆ. ಅದಕ್ಕೊಂದು ಸಮಿತಿ ಮಾಡುತ್ತೇವೆ, ಕನ್ನಡ ಚಲನಚಿತ್ರೋದ್ಯಮ ಬೆಳೆಯಬೇಕಾದರೆ, ಬೇರೆ ಚಿತ್ರಗಳ ಬಗ್ಗೆಯ ಗಮನದಲ್ಲಿಟ್ಟುಕೊಂಡು ಏನು ಮಾಡಬಹುದೆಂಬುದರ ಬಗ್ಗೆ ಒಂದು ಸ್ಪಷ್ಟವಾದಂಥ ಒಂದು ವರದಿಯನ್ನು ಕೊಟ್ಟರೆ, ಅದರ ಆಧಾರದ ಮೇಲೆ ತೀರ್ಮಾನ ಮಾಡುತ್ತೇವೆ

10 ತುಂಗಾ ಏತನೀರಾವರಿ ಯೋಜನೆಯನ್ನು ಪ್ರಾರಂಭಿಸುವ ಬಗ್ಗೆ

ಶ್ರೀ ಎಂ ಪಿ ರೇಣುಕಾಚಾರ್ಯ (ಹೊನ್ನಾಳಿ) ಮಾನ್ಯ ಸಭಾಧ್ಯಕ್ಷರೆ, ತುಂಗಾ ಏತನೀರಾವರಿ ಸೌಲಭ್ಯಕ್ಕಾಗಿ 1997ರಲ್ಲಿ ಆಡಳಿತಾತ್ಮಕ ತಾಂತ್ರಿಕ ಅನುಮೋದನೆ ದೊರೆತಿದ್ದು, 1997–98ರ ಆಯವ್ಯಯದಲ್ಲಿ ಇಪ್ಪತ್ನಾಲ್ಕು ಕೋಟಿ ಹದಿನೆಂಟು ಲಕ್ಷ ರೂಪಾಯಿಗಳನ್ನು ಒದಗಿಸುತ್ತೇವೆಂದು ಹೇಳಿದ್ದರು ಅಂದಿನ ಮುಖ್ಯಮಂತ್ರಿಗಳಾದ ಸನ್ಮಾನ್ಯ ದಿ ಜೆ.ಹೆಚ್ ಪಟೇಲರು, ಈ ತುಂಗಾ ಏತನೀರಾವರಿ ಯೋಜನೆಗೆ ಬಂದು ಪೂಜೆಯನ್ನು ಕೂಡ ಸಲ್ಲಿಸಿ ಅಡಿಗಲ್ಲನ್ನು ಹಾಕಿದರು, ಆದರೆ ಇದುವರೆಗೂ ಏತನೀರಾವರಿ ಯೋಜನೆ ಕಾರ್ಯ ಆರಂಭವಾಗಿಲ್ಲ ಅಂದಿನ ನೀರಾವರಿ ಸಚಿವರಾಗಿದ್ದ ದಿ ನಾಗೇಗೌಡರನ್ನು ಈ ಸಂದರ್ಭದಲ್ಲಿ ನಾನು ನೆನಪಿಸಿಕೊಳ್ಳುತ್ತೇನೆ ಸಣ್ಣ ನೀರಾವರಿ ಇಲಾಖೆಯಲ್ಲಿರುವ ಈ ತುಂಗಾ ಯೋಜನೆಯನ್ನು ದೊಡ್ಡ ನೀರಾವರಿ ಇಲಾಖೆಗೆ ಹಸ್ತಾಂತರಗೊಳಿಸಿ ಇದನ್ನು ಮಾಡಲೇಬೇಕೆಂದು ಎರಡು ಸಾರಿ ಆ ಸ್ಥಳಕ್ಕೆ ಭೇಟಿ ಕೊಟ್ಟಿದ್ದರು ಈ ಯೋಜನೆ ಜಾರಿಗೆ ಬಂದರೆ ಐಹೊಳೆ, ಗೌಡನಕೆರೆ, ಬಾರೆಹಳ್ಳಿಗಳಲ್ಲಿ ಕೆರೆಗಳು ತುಂಬುತ್ತವೆ, 16 ಟಿಎಂಸಿ ನೀರನ್ನು